ಮಹಿಳೆಯರು ಅನೇಕ ರೀತಿಯಲ್ಲಿ ಪರಸ್ಪರ ದೂರವಾಗುತ್ತಲಿರುವುದು ಅವರಿಗೆ ಯಾವ ರೀತಿಯ ಒಳಿತನ್ನೂ ಮಾಡುವುದಿಲ್ಲ. ಸೋದರಿತ್ವವೆಂಬ ಭಾವನಾ ಪರಿಧಿಯೊಳಗೆ ಎಲ್ಲ ಮಹಿಳೆಯರೂ ಸೇರಿ ಪರಸ್ಪರ ನೀಡುವ ಸಹಕಾರದಲ್ಲಿ ಸುಕೃತಭಾವ ಇರಬೇಕಿದೆ. ನನ್ನ ಮರುಕಥನದಲ್ಲಿ ರಾಮಾಯಣದ ಅಮುಖ್ಯ ಪಾತ್ರವಾದ ಶೂರ್ಪನಖಿಯಿಂದಲೇ ಸೀತೆಗೆ ಸೌಂದರ್ಯದ ನಿಜ ಅರ್ಥ ತಿಳಿದುಬರುತ್ತದೆ. ಮತ್ತು ಸೀತೆಗಿಂತ ಕಿರಿಯಳಾದ ಊರ್ಮಿಳೆ ರಾಜ್ಯಾಧಿಕಾರದ ರಹಸ್ಯವನ್ನು ಸೀತೆಗೆ ತಿಳಿಸುತ್ತಾ ರಾಮನಿಂದ ವಿಮುಕ್ತೆಯಾಗಲು ದಾರಿ ತೋರಿಸುತ್ತಾಳೆ. ಹೀಗೆ ಹೆಂಗಸರು ಮೇಲು–ಕೀಳು, ಹಿರಿ–ಕಿರಿ ಎಂಬ ಭೇದವಿಲ್ಲದೇ ಸೋದರಿತ್ವವೇ ಶಕ್ತಿಯೆಂದು ತಿಳಿದು ಮುನ್ನಡೆಯಬೇಕು. ಪುರಾಣಗಳಲ್ಲಿಯೂ ಸ್ತ್ರೀಯರನ್ನು ಪಿತೃಸಂಸ್ಕೃತಿ ಹಿಡಿದಿಟ್ಟ ರೀತಿ ಮತ್ತು ಆ ಸಂಕೋಲೆಗಳಿಂದ ಅವರೆಲ್ಲಾ ಹೇಗೆ ಬಿಡುಗಡೆಗೊಂಡರು ಎಂದು ತೋರಿಸಿಕೊಡುವುದೇ 'ವಿಮುಕ್ತೆ' ಸಂಕಲನದ ಕತೆಗಳ ಮುಖ್ಯ ಉದ್ದೇಶ. ಆ ಎಲ್ಲಾ ಕತೆಗಳೂ ಈ ಕಾಲದ ಸ್ತ್ರೀಯರಿಗೂ ಸಂವಾದಿಯಾಗುತ್ತವೆ. ಇಂದಿಗೂ ಪಿತೃಪ್ರಧಾನ ಸಂಸ್ಕೃತಿಯಲ್ಲಿ ಅನುಮಾನ ಅವಮಾನಕ್ಕೆ ಒಳಗಾಗುತ್ತಿರುವ ಅನೇಕ ಸೀತೆ, ಅಹಲ್ಯೆ, ರೇಣುಕೆಯರು ನಮ್ಮ ನಡುವೆ ಇದ್ದಾರೆ. ಅಂಥವರಿಗೆ ಈ ಕತೆಗಳು ಸಾಂತ್ವನ ನೀಡಬಲ್ಲವು. ಅಂದು ಪರಪುರುಷನನ್ನು ಬಯಸಿದ ಕಾರಣಕ್ಕೆ ಶೂರ್ಪನಖಿಯ ಮೂಗು ಕಿವಿಗಳನ್ನು ಕತ್ತರಿಸಲಾಯಿತು. ಈಗ ಸ್ತ್ರೀ ತಾನಾಗಿಯೇ ಏನೂ ಬಯಸದಿದ್ದರೂ ಆಕೆಯ ಮುಖಕ್ಕೆ ಆಸಿಡ್ ಎರಚಲಾಗುತ್ತಿದೆ. ಅಷ್ಟೇ ವ್ಯತ್ಯಾಸ. ಅಂದಿನ ಹಿಂಸೆಯು ರೂಪಾಂತರಗೊಂಡಿದೆಯೇ ಹೊರತು ಕಡಿಮೆಯಾಗಲಿಲ್ಲ, ಅದು ಸೀತೆ ಶೂರ್ಪನಖಿಯಷ್ಟು ಹಳತೂ ನಿರ್ಭಯಾದಷ್ಟು ಹೊಸತೂ ಆಗಿದೆ.

ಅಂದು ಪರಪುರುಷನನ್ನು ಬಯಸಿದ ಕಾರಣಕ್ಕೆ ಶೂರ್ಪನಖಿಯ ಮೂಗು ಕಿವಿಗಳನ್ನು ಕತ್ತರಿಸಲಾಯಿತು. ಈಗ ಸ್ತ್ರೀ ತಾನಾಗಿಯೇ ಏನೂ ಬಯಸದಿದ್ದರೂ ಆಕೆಯ ಮುಖಕ್ಕೆ ಆಸಿಡ್ ಎರಚಲಾಗುತ್ತಿದೆ. ಅಷ್ಟೇ ವ್ಯತ್ಯಾಸ. ಅಂದಿನ ಹಿಂಸೆಯು ರೂಪಾಂತರಗೊಂಡಿದೆಯೇ ಹೊರತು ಕಡಿಮೆಯಾಗಲಿಲ್ಲ, ಅದು ಸೀತೆ ಶೂರ್ಪನಖಿಯಷ್ಟು ಹಳತೂ ನಿರ್ಭಯಾದಷ್ಟು ಹೊಸತೂ ಆಗಿದೆ.

◆ **'ಬಂಧಿತ' ಕತೆಯಲ್ಲಿ ಸೀತೆಯ ನಿಸ್ವಾರ್ಥಕ್ಕೆ ಸೋತ ರಾಮನನ್ನು ಚಿತ್ರಿಸಿದ್ದೀರಿ. ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ತೆಲುಗು ಸಾಹಿತ್ಯ ಲೋಕ ಈ ಕತೆಗೆ ಸ್ಪಂದಿಸಿದ ಬಗೆ ಹೇಗೆ?**

ನನಗೆ ಆ ಕತೆಯ ಬಗ್ಗೆ ಓದುಗರು ಹೇಗೆ ಸ್ಪಂದಿಸಿದ್ದಾರೆಂದು ಗೊತ್ತಿಲ್ಲ, ಬಹುಶಃ ಚರ್ಚಿಸಿರಬಹುದು. ನನ್ನವರೆಗೂ ಯಾವ ವಿವರಗಳೂ ತಲುಪಿಲ್ಲ, ಆದರೆ ಕತೆಯಲ್ಲಿ ನಾನು ಹರಿಸಿದ ದೃಷ್ಟಿ ಎಡಪಂಥೀಯ ಲೇಖಕರಿಗೆ ತುಂಬಾ ಹೊಸತು. ಎಡಪಂಥೀಯ ಲೇಖಕರು ನೇರಾನೇರವಾಗಿ ರಾಮನನ್ನು ವಿಮರ್ಶಿಸುವುದನ್ನೇ ಮಾಡುತ್ತಾರೆ, ಈಗಾಗಲೇ ಮಾಡಿದ್ದಾರೆ. ಅದು ಸಹಜವೂ ಆಗಿದೆ. ಆದರೆ ಒಂದು ರಾಜ್ಯಕ್ಕೆ, ಸಿಂಹಾಸನಕ್ಕೆ ಬಂಧಿತನಾದಂತಹ ರಾಮನನ್ನು ಕುರಿತು ನಾವು ಬೇರೆ ನೆಲೆಯಲ್ಲೇ ಕಂಡು ಬರೆಯಬೇಕಿದೆ ಅನ್ನಿಸಿತು. ಇಂದಿನ ದಿನಗಳಲ್ಲಿ ಪುರುಷರು ತಮ್ಮ ವಿಲಾಸ, ಆನಂದಕ್ಕಾಗಿ ತಮಗಿದ್ದ ಅಧಿಕಾರವನ್ನು ನೆಪ ಮಾಡಿಕೊಂಡು ಮಹಿಳೆಯರನ್ನು ಶೋಷಣೆ ಮಾಡುತ್ತಿದ್ದಾರೆ. ತಾವು ಹೇಗ್ಹೇಗೆ ಶೋಷಣೆ ಮಾಡುತ್ತಿದ್ದೇವೆ ಎಂಬುದು ಈ ಕತೆಯ ರಾಮನ ಪಾತ್ರದ ಮೂಲಕ ಅವರಿಗೆ ಪ್ರತಿಬಿಂಬಿತವಾಗಬಹುದೆಂಬುದು ನನ್ನ ಭಾವನೆ. ಪುರುಷರು ಸಾಧಾರಣವಾಗಿ ತಾವು ಸ್ವೇಚ್ಛಾಜೀವಿಗಳೆಂದು ನಂಬುತ್ತಾರೆ. ಆದರೆ ಅನೇಕ ಸಂಕೋಲೆಗಳು ಅವರನ್ನೂ ಮುತ್ತಿಕೊಂಡಿವೆಯೆಂದು